Regd No B G 165 16-2-1970

SATYAVADI Daily, MYSORE 4 ✱ 53 rd Year of Publication

Golden Jubilee Celebrated Paper

ಸತ್ಯವಾದಿ

ಸುವರ್ಣ ಮಹೋತ್ಸವ ಸಂಭ್ರಮಿಸಿದ ಪತ್ರಿಕೆ

ಸ್ಥಾಪಕರು: ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣ ರಾವ್ [2 ಪೈಸೆ

ಕೇಂದ್ರಕ್ಕೆ ರಾಜಕೀಯ ಪರಿಷತ್ ಎಚ್ಚರಿಕೆ

ಜಯಪುರ– ವಿದ್ಯಾರ್ಥಿ ಸಂಘ ಕರೆದಿದ್ದ ಹರತಾಳ ನಿನ್ನೆ ಯಶಸ್ವಿಯಾಗಿ ನಡೆಯಿತು

ಪ್ರಕಟಣೆ

1968 – 69 ಮತ್ತು 1969 – 70 ನೇ ಸಾಲಿನ ತನ್ನ ರಿಜಿಸ್ಟ್ರೇಷನ್ 31–3–1970 ಕ್ಕೆ ಮುಗಿಯುವುದೆಂದು ಈ ವಿಭಾಗದ 4 ಮತ್ತು 5 ನೇ ವರ್ಗದ ರಿಜಿಸ್ಟರ್ ಆದ ಎಲ್ಲ ಕಂಟ್ರಾಕ್ಟರ್‌ಗಳ ಗಮನಕ್ಕೆ ಈ ಮೂಲಕ ಪ್ರಕಟಿಸಿದೆ. 1970 – 71 ಮತ್ತು 1971 – 72 ನೇ ಸಾಲಿಗೆ ರಿಜಿಸ್ಟ್ರೇಷನ್ ಮಾಡಿಸಲು ವಿಧಾಯಕವಾದ ಫಾರಂನಲ್ಲಿ ಅರ್ಜಿಗಳನ್ನು ಸಲ್ಲಿಸಬೇಕು. ಈ ಕಚೇರಿಯ ಹೆಸರಿನಲ್ಲಿ (ಎಕ್ಸಿಕ್ಯುಟೀವ್ ಇಂಜಿನಿಯರ್, ಪಿಹೆಚ್‌ಇ ವಿಭಾಗ, ಮೈಸೂರು) ರಿನ್ಯೂ ಮಾಡಿಸಲು ವಿಧಾಯಕವಾದ ಶುಲ್ಕ ರೂ. 20/– ನ್ನು XXXVII ಪಬ್ಲಿಕ್ ವರ್ಕ್ಸ್ ಲೆಕ್ಕಕ್ಕೆ ಜಮಾ ಮಾಡಿದ ಚಲನ್ – ಜಿ. ಮಿಸಲೇನಿಯಸ್ 2 ಇತರ ರಸೀತಿಗಳೊಡನೆ 31–3–1970 ಅಥವಾ ಅದಕ್ಕೆ ಮುಂಚೆ ಈ ಕಚೇರಿಗೆ ತಲಪುವಂತೆ ಅರ್ಜಿಗಳೊಡನೆ ಕಳುಹಿಸತಕ್ಕದ್ದು. ಇಲ್ಲವೇ ನಿಬಂಧನೆಗಳನ್ನು ಅನುಸರಿಸಿ ದಂಡ ವಿಧಿಸಲಾಗುವುದು. ರಿನ್ಯೂ ಅಧಿಕಾರಿಗಳು ಅಥವಾ ಷೆಡ್ಯೂಲ್ಡ್ ಬ್ಯಾಂಕುಗಳಿಂದ 4 ನೇ ವರ್ಗದವರಿಗೆ ಕೊಡಲಾಗುವ ಸಾಲ್ವೆನ್ಸಿ ಸರ್ಟಿಫಿಕೇಟ್ 31–3–1972 ರವರೆಗೆ ಊರ್ಜಿತವಾಗುವುದು. ವಿಧಾಯಕವಾದ ಫಾರಂನಲ್ಲಿ ಆದಾಯ ತೆರಿಗೆ ಮತ್ತು ಸಾರಾಟ ತೆರಿಗೆ ಪಾವತಿ ಮಾಡಿದ ಸರ್ಟಿಫಿಕೇಟ್‌ನ್ನು ಅರ್ಜಿಯೊಡನೆ ಲಗತ್ತಿಸಿರತಕ್ಕದ್ದು.

ಸಹಿ/– ಎಕ್ಸಿಕ್ಯುಟೀವ್ ಇಂಜಿನಿಯರ್, ಪಿಹೆಚ್‌ಇ ವಿಭಾಗ, ಮೈಸೂರು.

ದೇಶ್ಯರಿಗೆ ಕಪ್ಪು ಬಾವುಟ ಪ್ರದರ್ಶನ

ಹೈದರಾಬಾದು– ಶ್ರೀ ಮೊರಾರ್ಜಿ ದೇಸಾಯಿ ಶ್ರೀ ಕೃಷ್ಣದೇವರಾಯ ಆಂಧ್ರ ಭಾಷಾ ನಿಲಯಕ್ಕೆ ಒಂದು ಸಭೆಗಾಗಿ ಪ್ರವೇಶಿಸುತ್ತಿದ್ದಾಗ ಕೆಲವು ಹುಡುಗಿಯರು ಸೇರಿ 100 ಯೌವನಸ್ಥರು ನಡೆಸಿದ ಪ್ರದರ್ಶನದಲ್ಲಿ 30 ಮಂದಿ ಕಪ್ಪು ಬಾವುಟ ಹಿಡಿದಿದ್ದರು – ಒಬ್ಬ ಪ್ರದರ್ಶನಕಾರನು ದೇಸಾಯ ಕಪ್ಪು ಬಾವುಟ ಕಿತ್ತು ಕೊಂಡು ಒಂದು ನಿಮಿಷದ ನಂತರ ಕೊಟ್ಟನು – ಮತ್ತೊಬ್ಬ ದೇಸಾಯರ ಕತ್ತಿಗೆ ಕಪ್ಪು ಬಾವುಟ ಇಟ್ಟನು.

★

ನೇತಾಜಿ ಚಲಚ್ಚಿತ್ರ

ನವದೆಹಲಿ— ನೇತಾಜಿ ಸೇಲಿನ ಒಂದು ಚಲಚ್ಚಿತ್ರ ನಾಪತ್ತೆಯಾಗಿದ್ದು, ಚಲಚ್ಚಿತ್ರ ವಿಭಾಗದ ತನಿಖೆಯೂ ವಿಫಲವಾಗಿದೆ.

○

ಜಾಕ್‌ಪಾಟ್

ಮದರಾಸು— ನಿನ್ನೆ ಕುದುರೆ ಜೂಜಿನಲ್ಲಿ ಜಾಕ್‌ಪಾಟ್‌ನಲ್ಲಿ 3 ಟಿಕೀಟುಗಳಿಗೆ ತಲಾ ರೂ 120903 ದೊರೆಯಿತು.

○

ಪ್ರಧಾನಿ ನುಂಗಾದನರ ಮೇಲೆ ದಾವಾ

ಮಾಂಟ್ರೀಲ್— ತನ್ನನ್ನು ಕಳೆದ ಸೆಪ್ಟಂಬರು 15 ರಂದು ದಸ್ತಗಿರಿ ಮಾಡಿದ್ದ ಕ್ವೆಬೆಕ್ ಪಾರ್ಲಿಮೆಂಟು ಸದಸ್ಯ ಶ್ರೀ ಮುಧು ಲಿಮೆ. ಪ್ರಧಾನಿ, ಗೃಹ ಮಂತ್ರಿ, ಮತ್ತಿತರ 9 ಮಂದಿ ಮೇಲೆ 2ಲ್ಷ000 ರೂಗಳ ಪರಿಹಾರಕ್ಕೆ ದಾವಾ ಹಾಕಿರುವರು — ಸಮನ್ಸ್ ಹೊರಡಿಸಲಾಗಿದೆ– ವಿಚಾರಣೆ ಮಾರ್ಚಿ 10 ಕ್ಕೆ ಇಡಲಾಗಿದೆ.

★

ಸಚಿವಾಲಯಕ್ಕೆ ಟೆಲಿಫೋನ್ ನಿಂತಿತು

ಪಂಜಿ— ಗೋವಾದ ಕೇಂದ್ರ ಪ್ರದೇಶ ಸರಕಾರದ ಸಚಿವಾಲಯದ ಟೆಲಿಫೋನನ್ನು ನಿಲ್ಲಿಸಲಾಯಿತು : 1969 ಮಾರ್ಚಿವರಗೆ ಕೊಡಬೇಕಾಗಿರುವ ಬಾಕಿ ರೂ 12000 ಪಾವತೀಮಾಡದಿರುವುದೇ ಕಾರಣ.

●

ವೀರೇಂದ್ರರ ನುಡಿ

ಬೆಳಗಾಂ— ಬೆಳಗಾಂ ವಿಭಜನೆ ಒಂದು ಹುಚ್ಚು ಮಾತೆಂದೂ, ತಾವು ಮುಖ್ಯ ಮಂತ್ರಿಯಾಗಿರುವವರೆಗೆ ಬೆಳಗಾವಿನ ಒಂದು ಅಂಗುಲ ಕೂಡ ಮೈಸೂರಿನಿಂದ ಜಾರಿಹೋಗಲು ಅವಕಾಶ ಕೊಡುವುದಿಲ್ಲವೆಂದು ರಾಜಕೀಯ ಸಮ್ಮೇಳನದಲ್ಲಿ ಮುಖ್ಯ ಮಂತ್ರಿ ಶ್ರೀ ವೀರೇಂದ್ರ ಪಾಟೀಲರು ಹೇಳಿದರು

○

ಮಹಿಳೆಗೆ ಪೋಸ

ಶಿವಮೊಗ್ಗ— ಕೆಲಸ ಹುಡುಕಿಕೊಂಡು ಸಾಗರದಿಂದ ಬಸ್‌ನಲ್ಲಿ ಬಂದ ಒಬ್ಬ ಮಹಿಳೆಗೆ ಇಬ್ಬರು ಕೆಲಸ ಕೊಡಿಸುವ ಆಸೆ ತೋರಿಸಿ, ಅವಳಿಂದ ಕಿವಿ ಓಲೆ ಮತ್ತು ಸ್ವಲ್ಪ ಹಣ ಕಸಿದುಕೊಂಡು ಹೋದವರು ಪತ್ತೆಯಿಲ್ಲವಾಗಿ ಪೋಲೀಸಿಗೆ ದೂರುಕೊಡಲಾಗಿದೆ.

★

ಲಾಕ್ ಔಟ್ ನಂತರ

ಗುಲ್ಬರ್ಗ— 1700 ಕಾರ್ಮಿಕರಿರುವ ಇಲ್ಲಿಯ ಗಿರಣಿಯನ್ನು ಲಾಕ್ ಮಾಡಲ್ಪಟ್ಟಿರುವದರಿಂದ, ಶಾಂತಿಗೆ ಭಂಗವಾದೀತೆಂಬ ಶಂಕೆಯಿಂದ ಮ್ಯಾಜಿಸ್ಟ್ರೇಟರು ಮೆರವಣಿಗೆ, ಸಭೆಗಳನ್ನು 15 ದಿನಗಳ ಕಾಲ ಪ್ರತಿಬಂಧಿಸಿರುವರು

ಕೇಂದ್ರಕ್ಕೆ ಎಚ್ಚರಿಕೆ

ಬೆಳಗಾಂ— ಮೈಸೂರು–ಮಹಾರಾಷ್ಟ್ರ ಗಡಿ ವಾಜ್ಯಕ್ಕೆ ಮಹಾಜನ ಕಮಿಷನ್ ನಿರ್ಣಯ ಬಿಟ್ಟು ಬೇರೆ ಪರಿಹಾರ ಹುಡುಕಲು ಹೊರಟರೆ ತೀವ್ರ ಪರಿಣಾಮದ ಭೀಕರ ಪರಿಸ್ಥಿತಿ ಸೃಷ್ಟಿಯಾಗುವುದೆಂದು ಕೇಂದ್ರಕ್ಕೆ ರಾಜಕೀಯ ಪರಿಷತ್ತು ಎಚ್ಚರಿಸಿದೆ.

★

ಮಹಿಳೆ ಮೇಲೆ ಅತ್ಯಾಚಾರ

ಪೂನಾ— ವಾಸ್ಕೋಡಿಗಾಮ – ಪೂನಾ ಎಕ್ಸ್‌ಪ್ರೆಸ್ ರೈಲಿನಲ್ಲಿ ಒಂದನೇ ತರಗತಿ ಗಾಡಿಯಲ್ಲಿ ಪ್ರಯಾಣೀಕಳಾಗಿದ್ದ 20 ವರ್ಷದ ವಿವಾಹಿತ ಮಹಿಳೆಯ ಮೇಲೆ ಪುನಃಪುನಃ ಅಕ್ರಮ ಸಂಭೋಗ ನಡೆಸಿದ 5 ಮಂದಿ ಸೈನ್ಯದವರನ್ನು ರೈಲ್ವೆ ಪೋಲೀಸರು ದಸ್ತಗಿರಿಮಾಡಿ, ಜ್ಞಾನಶೂನ್ಯಳಾಗಿದ್ದ ಆ ಮಹಿಳೆಯನ್ನು ಸೆಸೂನ್ ಆಸ್ಪತ್ರೆಗೆ ಸೇರಿಸಿದರು.

●

ತಮ್ಮ ಪಕ್ಷ ಅಡಳಿತಕ್ಕೆ ಬಂದರೆ

ಕೊಲಂಬೊ— ತಮ್ಮ ಸಮ್ಮಿಶ್ರ ಪಾರ್ಟಿ ಅಧಿಕಾರಕ್ಕೆ ಬಂದರೆ, ಸಿಲೋನಿಗೆ ಆಮದಾಗುವ ತಮಿಳು ಮತ್ತು ಹಿಂದಿ ಚಿತ್ರಗಳನ್ನು ಪ್ರತಿಬಂಧಿಸುವದಾಗಿ ಶ್ರೀಮಾವೋ ಬಂಡಾರನಾಯಿಕೆ ಹೇಳಿದರು.

★

ನೀರಿನ ಉತ್ಕಟಾವಸ್ಥೆ

ಹೈದರಾಬಾದು— ಸಿಕಂದರಾಬಾದಿನಲ್ಲಿ ತೀವ್ರ ನೀರಿನ ಅಭಾವವಿದ್ದು, ಬಿಂದಿಗೆ ನೀರಿಗೆ 4 ರೂಗಳಂತೆ ಮಾರಲಾಗುತ್ತಿದೆಯೆಂದೂ ಶಾಸನ ಸಭೆಯಲ್ಲಿ ತಿಳಿಸಲಾಯಿತು. ಸಮಸ್ಯೆ ಪರಿಹಾರಕ್ಕೆ ಸೂಕ್ತ ಏರ್ಪಾಡು ಮಾಡಲಾಗುವುದೆನ್ನಲಾಯಿತು.

"Bank Road Bahusar – A Fair Price Shop in Actual Practice"

ನಿಲಯ ಆಭಾವಕ್ಕೆ ಮೆರವಣಿಗೆ

ಹೈದರಾಬಾದು— ಮುನಿಸಿಪಲ್ ಕಾರ್ಪೋರೇಷನ್ನಿನ ಸದಸ್ಯರು ಸಿಕಂದರಾ ಬಾದಿನಿಂದ ಅಲ್ಲಿನ ನೀರಿನ ಉತ್ಪಬಾನಪ್ಥೆ ಅರಿನನ್ನು ಶಾಸನ ಸಭಾ ಸ್ಪೀಕರರಿಗೆ ಮನವಿ ಮಾಡಲು ಮೆರವಣಿಗೆಯಲ್ಲಿ ಬಂದರು.

ಸಂಗೀತ ಉತ್ಸವ

ನವದೆಹಲಿ— ಫೆಬ್ರವರಿ 25 ರಿಂದ ಇಲ್ಲಿ ಒಂದು ವಾರ ಸಂಗೀತ ಉತ್ಸವ ನಡೆಸಲು ಏರ್ಪಡಿಸಲಾಗುತ್ತಿದೆ.

ಬಸ್ ಅಕಸ್ಮಿಕ

ತುಮಕೂರು— ಬೆಂಗಳೂರಿನಿಂದ ಕಲ್ಯಾಣದುರ್ಗಕ್ಕೆ ಹೋಗುತ್ತಿದ್ದ ಬಸ್ ಎರುದುಗೆರೆ ಹತ್ತಿರ ಅಕಸ್ಮಿಕಕ್ಕೆ ತುತ್ತಾಗಿ 48 ಮಂದಿ ಗಾಯಗೊಂಡರು.

ಆಜ್ಞೋಲ್ಲಂಘನೆ

ಚಂಡೀಘರ— ಸೆಕ್ಷನ್ 144 ರ ಆಜ್ಞೆ ಉಲ್ಲಂಘಿಸಿದ ಹರಯಾಣಾ ನಾಯಕ ಶ್ರೀ ರಿಜಕ್ ರಾಂ ಮತ್ತಿತರ 53 ಮಂದಿ ದಸ್ತಗಿರಿ ಮಾಡಲ್ಪಟ್ಟರು.

ಮೂಲಭೂತ ಹಕ್ಕು

ಮದರಾಸು— ಮೂಲಭೂತ ಹಕ್ಕುಗಳಿಂದ ಆಸ್ತಿ ಮೇಲಿನ ಹಕ್ಕನ್ನು ತೆಗೆದು ಹಾಕುವುದು ಅಪಾಯಕಾರಿಯೆಂದೂ, ಸರ್ವಾಧಿಕಾರಕ್ಕೆ ಮಾರ್ಗವಾಗುವುದೆಂದೂ ಪಾರ್ಲಿಮೆಂಟಿನ ಮಾಜಿ ಸದಸ್ಯ ಡಾ || ಕೃಷ್ಣಸಾಮಿ ಹೇಳಿದರು.

SHAKTI SUDHA

A Superb Tonic

ಪ್ರಮುಖ ವರ್ತಮಾನಗಳಿಗೆ ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ

ಅದರಲ್ಲಿ ಜಾಹಿರಾತು ಪ್ರಕಟನೆ ಲಾಭದಾಯಕ

ಸ್ಥಳದಲ್ಲಿ ಚಂದಾ ತಿಂಗಳಿಗೆ 40 ಪೈಸೆ; ಅಂಚೆವೆಚ್ಚ ಸೇರಿ ವರ್ಷಕ್ಕೆ ರೂ 10-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ 2

ಗೋರಕ್ಷಣೆಗೆ ಚಂದಾ ಮತ್ತು ಡೊನೇರ್ಷ ಪಾವತಿಮಾಡುವ ಅಡ್ರೆಸ್

1 ಶ್ರೀ ಅನಂತನರಸಿಂಹಯ್ಯಂಗಾರ್, ಶಾಸ್ತ್ರಧರ್ಮಪ್ರಚಾರ ಸಭಾ
ಹೊಂಗನೂರು, ಚಾಮರಾಜನಗರ ತಾಲ್ಲೂ

2 ಶ್ರೀ ಬಿ ಜಿ ಶಾಸ್ತ್ರಿ, ಆಥರ್ ಮತ್ತು ಅಸ್ಟ್ರಾಲಜರ್, 180 ನ್ಯೂ ಬ್ಲಾಕ್,
ವಿದ್ಯಾರಣ್ಯಪುರಂ, ಮೈಸೂರು.

3. ಡಾ || ಪಿ ಎಸ್ ನಾರಾಯಣ್, ಮತ್ತು ಪಿ ಎಸ್. ವಿಶ್ವನಾಥ್,
ಪ್ರಾಣಿದಯಾ ಪ್ರಚಾರಕರು, 320 – 5 ನೆ ಬ್ಲಾಕ್, ಜಯನಗರ, ಬೆಂಗಳೂರು
ಗೋರಕ್ಷಣ ಆಫೀಸ್, ಸತ್ಯವಾದಿ ಪ್ರೆಸ್ ಚಾಮರಾಜಪುರಂ, ಮೈಸೂರು 4

Edited Printed Published by Dharmaprachara Nirata
M S Krishna Rao (Proprietor) at the Satyavadi Press
Chamarajapuram, Mysore

ಪ್ರಭಾತ್ ಟಾಕೀಸ್ ಅಮೋಘ 7 ನೇ ವಾರ
ಶಿವಾಜಿ ಅಮೋಘ ಪ್ರಾರಂಭ
.... ನೂಕುನುಗ್ಗಲಲ್ಲಿ ಜನ ಬಂದು ನೋಡುತ್ತಿರುವರು ....
ಓರ್ವ ಹೆಣ್ಣಿನ ಮನಕರಗುವ ಸನ್ನಿವೇಶಗಳಿಂದ ಕೂಡಿದ ಅಮೋಘ ಕನ್ನಡ ಚಿತ್ರ

ಗೆಜ್ಜೆ ಪೂಜೆ

ನಟವರ್ಗ– ಕಲ್ಪನ, ಅಶ್ವತ್ಥ್, ಬಾಲಕೃಷ್ಣ, ಪಂಡರಿಬಾಯಿ
[ದಿನ 3 ಪ್ರದರ್ಶನಗಳು]

ಆಪೆರಾ— ಅಮೋಘ 2 ನೇ ವಾರ
.... ಅತ್ಯಮೋಘ ಹಿಂದಿ ಚಿತ್ರ ....

ಪಾರ್ ಹಿ ಪಾರ್

ಶೈಲ
ಪಾತ್ರ – ವೈಜಯಂತಿ ಮಾಲ ಧರ್ಮೇಂದ್ರ
ದಿನ 3 ಆಟಗಳು

Help The Gorakshana



Protect the Cow

ಗೋರಕ್ಷಣೆ ಮತ್ತು ಪ್ರಾಣಿದಯಾ ಕಾರ್ಯಗಳು ಹಚ್ಚೆ ಹಚ್ಚಾಗಿ ನಡೆಯಲಿ
ಗೋರಕ್ಷಣೆಗೆ ಬೆಂಬಲ ನೀಡಿ

ಅಖಿಲ ಭಾರತದಲ್ಲಿ ಕೂಡಲೇ ಗೋವಧೆ ನಿಷೇಧವಾಗಲಿ

Quality Printing — Neat Binding
Lakshminarasimha Press
Sivarampet, Mysore

ದೇಶದ ಹಿತಕ್ಕಾಗಿ ಕುಟುಂಬ ಯೋಜನೆ